ವಾಣಿಜ್ಯ ಪರೀಕ್ಷೆಯ ಮೌಲ್ಯಮಾಪಕರಿಂದ ಬಂದಿರುವ ಬಿಲ್ಲುಗಳು

3389 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1991ರ ಜೂನ್ ಮಾಹೆಯಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಮೌಲ್ಯಮಾಪಕರಿಂದ ಬಂದಿರುವ ಪ್ರಯಾಣ ಭತ್ಯ, ದಿನಭತ್ಯೆ ಮತ್ತು ಸಂಭಾವನೆ ಬಿಲ್ಲುಗಳು - ಲೆಕ್ಕ ಪತ್ರ ಶಾಖೆಗೆ ಎಷ್ಟು ಬಂದಿರುತ್ತದೆ?*

2) *ಪ್ರವಾಸ ಭತ್ಯ ಬಿಲ್ಲುಗಳು ಆಗಾಗ್ಗೆ ಗೈರು ವಿಲೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಮತ್ತು ಮೌಲ್ಯಮಾಪಕದಿಂದ ನಕಲು ಪ್ರತಿಯ ಬಿಲ್ಲುಗಳನ್ನು ಕೇಳಲಾಗುತ್ತಿದೆಯೆ?*

3) *ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಲೆಕ್ಕ ಪತ್ರ ಶಾಖೆಯಿಂದ ಮೌಲ್ಯ ಮಾಪಕರ ಪ್ರವಾಸ ಭತ್ಯ ಬಿಲ್ಲುಗಳು, ದಿನಭತ್ಯ ಬಿಲ್ಲುಗಳು ಮತ್ತು ಸಂಭಾವನೆ ಬಿಲ್ಲುಗಳನ್ನು ವಿಳಂಭವಾಗಿ ಪಾವತಿ ಮಾಡಿರುವುದು ನಿಜವೇ?*

4) *ಸರ್ಕಾರವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಲೆಕ್ಕ ಪತ್ರ ವಿಭಾಗದ ಕಾರ್ಯ ವೈಖರಿಯನ್ನು ಉತ್ತಮಪಡಿಸಲು ಯಾವ ಕ್ರಮ ಕೈಗೊಂಡಿದೆ.*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) <u>ಕೇಂದ್ರವಾರು</u>

1) ಬೆಂಗಳೂರು ಕೇಂದ್ರದಿಂದ : 519

2) ಮೈಸೂರು ಕೇಂದ್ರದಿಂದ : 119

3) ಬೆಳಗಾಂ ಕೇಂದ್ರದಿಂದ : 213

2) ಇಲ್ಲ.

3) ಇಲ್ಲ.

4) ಉದ್ಭವಿಸುವುದಿಲ್ಲ.

ನ್ಯಾಷನಲ್ ಕೋಆಪರೇಟಿವ್ ಬ್ಯಾಂಕಿ ನಿ. ಬೆಂಗಳೂರು ಇವರಿಂದ ಸಾಲ ಮನ್ನಾ ಮಾಡಲಾದ ಹಣ.

3270 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನ್ಯಾಷನಲ್ ಕೋಆಪರೇಟಿವ್ ಬ್ಯಾಂಕ್ ನಿ, ಬೆಂಗಳೂರು ಇದರಲ್ಲಿ 1985-86ರಿಂದ ಇಂದಿನವರೆಗೆ ಮನ್ನಾ ಮಾಡಲ್ಪಟ್ಟ ಕೆಟ್ಟ ಸಾಲಗಳ ಒಟ್ಟು ಮೊಬಲಗು (ವರ್ಗಾವಾರು ಮಾಹಿತಿ- ಮನ್ನಾ ಮಾಡಲ್ಪಟ್ಟ ಸಾಲದ ನಮೂನೆಗಳನ್ನು ನೀಡುವುದು)*

ಆ) *ಆಡಳಿತ ಮಂಡಳಿ ಸದಸ್ಯರು ತೆಗೆದುಕೊಂಡ ಸಾಲವನ್ನು ಮನ್ನಾ ಮಾಡಲಾಗಿದೆಯೇ?*

ಇ) *ಹಾಗಿದ್ದಲ್ಲಿ ಅವುಗಳ ವಿವರಗಳು*

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ರಾಜ್ಯ ಸಚಿವರು) :